(ಶ್ರೀ ಎಚ್. ಸಿದ್ದವೀರಪ್ಪ.)

ಎಲ್ಲಿ ದೊರಕುತ್ತವೆಯೋ ಅಲ್ಲಿ ಅದರ ಸ್ಥಾಪನೆಗೆ ಅವಕಾಶ ಕೊಡುವುದು ಯುಕ್ತವಾದುದು.

ಶ್ರೀ ಇಮಾಂರವರಿಗೆ ಗೊತ್ತಿರುವಹಾಗೆ ಹರಿಹರದಲ್ಲಿ ಇಂಡಸ್ಟ್ರಿಯಲ್ ಸಬರ್ಬ್‌ಮಾಡಿ, ಕಾಲೊನಿ ಮಾಡಿ, 300 ಎಕರೆಯಷ್ಟು ಜಮೀನು ಪ್ರದೇಶವನ್ನು ಕೈಗಾರಿಕೆಯ ಸ್ಥಾಪನೆಗಾಗಿ ಪ್ರತ್ಯೇಕವಾಗಿಟ್ಟಿದ್ದರೂ ಇದುವರೆಗೆ ಅಲ್ಲಿ ಒಂದು ಕೈಗಾರಿಕೆಯೂ ಊರ್ಜಿತ ಸ್ಥಿತಿಗೆ ಬಂದಿಲ್ಲ. ಯಾರಾದರೂ ಹರಿಹರದಲ್ಲಿ ಕೈಗಾರಿಕೆಯ ಸ್ಥಾಪನೆ ಮಾಡಲು ಮುಂದೆಬಂದರೆ ಸರ್ಕಾರದವರು ಅವರಿಗೆ ಆದಷ್ಟುಮಟ್ಟಿಗೆ ಸಹಾಯ ನೀಡುತ್ತಾರೆಂದು ಭರವಸೆ ಕೊಡುತ್ತೇನೆ.

ಶ್ರೀ ಇಮಾಂರವರು ಪಾಶ್ಚಿಮಾತ್ಯ ದೇಶಗಳಲ್ಲಿ localise ಆಗಿರತಕ್ಕ ವಿಷಯವನ್ನು ಹೇಳಿದರು. ಎಲ್ಲೆಲ್ಲಿ ಯಾವಯಾವ ಕೈಗಾರಿಕೆಗಳು ಇವೆ ಎಂಬ ಅಂಶವನ್ನು ಈ ಸಭೆಯ ಮುಂದೆ ಇಟ್ಟರು. ಅವರಿಗೂ ಗೊತ್ತಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಕೈಗಾರಿಕೆ ಬೆಳೆಯಬೇಕಾದರೆ ಮುಖ್ಯವಾಗಿ ಟ್ರಾನ್ಸ್‌ಪೋರ್ಟ್ ಫೆಸಿಲಿಟಿ ಎಲ್ಲೆಲ್ಲಿ ಇದೆಯೋ ಆ ಭಾಗದಲ್ಲಿ ಮಟ್ಟಿಗೆ ಕೈಗಾರಿಕೆ ಬೆಳೆದಿದೆ. ಅದನ್ನು ಜರ್ಮನಿಯಲ್ಲಿ ನೋಡಬೇಕು. ರೈನ್ ನದಿಯ ಎರಡು ದಂಡೆಯ ಪಕ್ಕದಲ್ಲೂ ರಸ್ತೆ ಮತ್ತು ರೈಲ್ವೆ ಲೈನು 106 ಮೈಲಿ ಹೋಗುತ್ತದೆ. ಆಲ್ಲೇ ಇಂಡಸ್ಟ್ರೀಸ್ concentrate ಆಗಿರುವುದನ್ನು ತಾವೆಲ್ಲಾ ಓದಿದ್ದೀರಿ, natural facilities, raw materials, transport facilities ಎಲ್ಲವೆ ಅಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗುವುದು ಸಹಜ. ಈ ಎಲ್ಲಾ ದೃಷ್ಟಿಯಿಂದ ನೋಡುವುದಾದರೆ ಬೆಂಗಳೂರು ನಗರದಲ್ಲಿ ಸರ್ಕಾರದ ವಿಶೇಷ ಪ್ರೋತ್ಸಾಹದಿಂದೇನೂ ಈ ಕೈಗಾರಿಕೆಗಳು ಬೆಳೆದಿಲ್ಲ, ಆದರೆ ಅವಕ್ಕೆ ಬೇಕಾದ natural facilities ಇರುವುದರ ದೆಶೆಯಿಂದ ಬೆಳೆದಿವೆ ಎಂದು ಹೇಳಬಹುದಾಗಿದೆ. ಬೆಂಗಳೂರು ನಗರದ ಜನಸಂಖ್ಯೆ ಮಿತಿಮೀರಿ ಹೋಗಬಾರದು ಎಂಬ ವಾದವನ್ನು ಕೆಲವರು ಎತ್ತಿದರು. ಅದನ್ನು ಒಪ್ಪಬಹುದು, ಏಕೆಂದರೆ ಒಂದು ನಗರದಲ್ಲಿ optimum size of population ಇದ್ದರೆ, health, sanitation, law and order ಇವನ್ನೆಲ್ಲಾ ಸರಿಯಾಗಿ maintain ಮಾಡುವುದಕ್ಕೆ ಆಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಈ ನಿರ್ಣಯದಲ್ಲಿರತಕ್ಕ ಮೂಲ ತತ್ವದ ಅಂಶವನ್ನು ಒಪ್ಪಿಕೊಂಡರೂ ಈ ನಿರ್ಣಯ ಇರತಕ್ಕ ರೀತಿಯಲ್ಲಿ ಬಹುಶಃ ಪ್ರತಿಪಾದಿಸುವುದಕ್ಕೆ ಕಷ್ಟವಾಗಿರುವುದರಿಂದ ಮಾನ್ಯ ಸ್ನೇಹಿತರು ನಾನು ಹೇಳಿರತಕ್ಕ ಸಮಜಾಯಿಷಿಯನ್ನು ಗಮನಿಸಿ ಈ ನಿರ್ಣಯವನ್ನು ಪಾಪನು ತೆಗೆದುಕೊಳ್ಳಬೇಕೆಂದು ಹೇಳಿ ಸವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri B. P. NAGARAJA MURTHY.—I beg leave of the House to withdraw the resolution.

The resolution was, by leave, withdrawn.

Business of the House.

Mr. SPEAKER.—The programme for the rest of the session will be like this: Tomorrow the Non-official business.

14th April, Wednesday.	
15th April, Thursday.	Presentation of Sales Tax Select Committee report. Consideration of the Mysore Housing Board Bill, and Mysore Cotton Pressing and Ginning Factories Bill and other Bills.
16th April, Friday.	Receipt of amendments up to 11 A.M.
16th April and 17th April.	Sales Tax (Amendment) Bill and other Bills.
18th Sunday.	Holiday.
19th April, Monday, 20th April, Tuesday.	Bills.

The House will now rise for the day and meet tomorrow at 12 NOON.

The House adjourned at Twenty-five Minutes past Twelve of the Clock to meet at Twelve of the Clock on Wednesday, the 14th April 1954.